ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	626
2	ಸದಸ್ಯರ ಹೆಸರು	:	ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	16-09-2021
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಿಬಿಎಂಪಿ ವ್ಯಾಪ್ತಿಯಲ್ಲಿ ಎಷ್ಟು ಶಾಲಾ/ಕಾಲೇಜುಗಳಿವೆ; ಅವುಗಳಲ್ಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಹುದ್ದೆಗಳು ಯಾವುವು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಡೆಸುತ್ತಿರುವ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಶಾಲಾ ಕಾಲೇಜಿನ ವಿವರಗಳು	ಇರುವ ಸಂಖ್ಯೆಗಳು
1.	ಪ್ರಾಥಮಿಕ ಶಾಲೆ	16
2.	ಪ್ರೌಢಶಾಲೆ	33
3.	ಪದವಿ ಪೂರ್ವ ಕಾಲೇಜು	15
4.	ಪದವಿ / ಸ್ನಾತಕೋತ್ತರ ಪದವಿ ಕಾಲೇಜು	04
	ಒಟ್ಟು	**68**

ಪ್ರಾಥಮಿಕ ಶಾಲೆಯಲ್ಲಿ ಮಂಜೂರಾಗಿರುವ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ವಿವರಗಳು	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1.	ಮುಖ್ಯ ಶಿಕ್ಷಕರು	05	00
2.	ಸಹ ಶಿಕ್ಷಕರು	130	96
3.	ದೈಹಿಕ ಶಿಕ್ಷಕರು	11	06
	ಒಟ್ಟು	**146**	**102**

ಪ್ರೌಢಶಾಲೆಯಲ್ಲಿ ಮಂಜೂರಾಗಿರುವ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ವಿವರಗಳು	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1.	ಮುಖ್ಯ ಶಿಕ್ಷಕರು	25	08
2.	ಸಹ ಶಿಕ್ಷಕರು	229	193
3.	ಕರಕುಶಲ ಶಿಕ್ಷಕರು	22	18
4.	ಸಂಗೀತ ಶಿಕ್ಷಕರು	05	05
5.	ಚಿತ್ರಕಲೆ ಶಿಕ್ಷಕರು	01	01
	ಒಟ್ಟು	**282**	**225**

ಪದವಿ ಪೂರ್ವ ಕಾಲೇಜಿನಲ್ಲಿ ಮಂಜೂರಾಗಿರುವ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ವಿವರಗಳು	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1.	ಪ್ರಾಂಶುಪಾಲರು	0	–
2.	ಉಪನ್ಯಾಸಕರು	4	–
	ಒಟ್ಟು	4	–

ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು / ಉಪನ್ಯಾಸಕರುಗಳೇ ಪ್ರಭಾರದ ಮೇಲೆ ಪದವಿ / ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುತ್ತಾರೆ.

ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಹುದ್ದೆಗಳ ಸಂಖ್ಯೆ: 541. ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಶಾಲಾ ಕಾಲೇಜಿನ ವಿವರಗಳು	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ
1.	ಪ್ರಾಥಮಿಕ ಶಾಲೆ	73
2.	ಪ್ರೌಢಶಾಲೆ (20 ಕಂಪ್ಯೂಟರ್ ಶಿಕ್ಷಕರುಗಳನ್ನು ಒಳಗೊಂಡಂತೆ)	268
3.	ಪದವಿ ಪೂರ್ವ ಕಾಲೇಜು (11 ಕಂಪ್ಯೂಟರ್ ಶಿಕ್ಷಕರುಗಳನ್ನು ಒಳಗೊಂಡಂತೆ)	137
4.	ಪದವಿ / ಸ್ನಾತಕೋತ್ತರ ಪದವಿ ಕಾಲೇಜು	63
	ಒಟ್ಟು	**541**

ಆ ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಶಿಕ್ಷಕರು/ಉಪನ್ಯಾಸಕರುಗಳನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ 81 ಮಂದಿ ಶಿಕ್ಷಕರು/ಉಪನ್ಯಾಸಕರು ಮಾನ್ಯ ಘನ ಉಚ್ಛ ನ್ಯಾಯಾಲಯದಲ್ಲಿ WP Nos. 27420-27424/2016 (S-REG) C/W WP Nos. 11992 & 12025-12099/2015 (S-REG) ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ಘನ ಉಚ್ಚ ನ್ಯಾಯಾಲಯವು ದಿನಾಂಕ:28-11-2016 ರಂದು ನೀಡಿರುವ ತೀರ್ಪಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದ ವಿಷಯ ಸಂಖ್ಯೆ: 26(210)/2016-17, ದಿನಾಂಕ: 09-08-2016ನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ದೇಶನ ನೀಡಿರುತ್ತದೆ ಮತ್ತು ಸರ್ಕಾರವು ಸದರಿ ಸಭೆಯ ನಿರ್ಣಯದ ಮೇಲೆ 4 ತಿಂಗಳ ಒಳಗಾಗಿ ತೀರ್ಮಾನ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ.

ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ: 29-06-2017 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರವು ಈ ಬಗ್ಗೆ ಪರಿಶೀಲಿಸಿ, ಆದೇಶ ಸಂಖ್ಯೆ: ನಅಇ 33 ಎಂಎನ್‌ಜಿ 2017, ದಿನಾಂಕ: 07-09-2017 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರ ನೇಮಕಾತಿಯು ಚಾಲ್ತಿಯಲ್ಲಿರುವ ಸರ್ಕಾರದ ನಿಯಮಾವಳಿಗಳಿಗೆ ವಿರುದ್ಧವಾಗಿದ್ದ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ.

ಇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಶಾಲಾ/ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾದ ಶಿಕ್ಷಕರು/ಉಪನ್ಯಾಸಕರುಗಳಿಗೆ ಕೊರೋನಾ ಸಮಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಶಿಕ್ಷಕರ/ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿರುವವರಿಗೆ ಶಾಲೆ ಶುರುವಾಗದಿರುವುದರಿಂದ ಅವರಿಗೆ ಗೌರವ ಧನವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿ ಬರುವ ಶಾಲಾ/ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕೋವಿಡ್-19ರ ಕೆಲಸ ಕಾರ್ಯಗಳಿಗೆ 8 ವಲಯಗಳಲ್ಲಿ ನೇಮಿಸಲಾಗಿದ್ದು, ನೇಮಿಸಲಾಗಿರುವ ಎಲ್ಲಾ ಶಿಕ್ಷಕರು/ಉಪನ್ಯಾಸಕರಿಗೆ ಗೌರವ ಧನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ

ಬೃಹತ್ ಬೆಂಗಳೂರು ಮಹಾನಗರ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸ್ವೆಟರ್‌ಗಳನ್ನು ವಿತರಿಸದೇ ವಿತರಿಸಿದ್ದೇವೆ ಎಂದು ಲೆಕ್ಕ ತೋರಿಸಿ ಸುಮಾರು ರೂ. 1.7 ಕೋಟಿ ರೂಗಳ ಸುಳ್ಳು ಬಿಲ್ಲು ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೇ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಸ್ಥಾಯಿ ಸಮಿತಿಯು ದಿನಾಂಕ: 28-02-2020 ರಂದು ನಡೆದ ಸಭೆಯಲ್ಲಿ ಲೆಕ್ಕ ಶೀರ್ಷಿಕೆವಾರು ಅನುದಾನ ಹಂಚಿಕೆ ಕುರಿತು ವಿಷಯ ಸಂಖ್ಯೆ: 22/2019-2020ರಲ್ಲಿ ಸಮಿತಿಯು ಕೈಗೊಂಡ ನಿರ್ಣಯದರೆತೆ ಸರ್ಕಾರದ ಸಂಸ್ಥೆಯಾದ ಹಾಗೂ (4ಜಿ) ವಿನಾಯಿತಿ ಹೊಂದಿರುವ **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದವರು** 1 ಜೊತೆ ಸ್ವೆಟರ್‌ಗೆ (1 ತುಂಬು ತೋಳು ಮತ್ತು 1 ಅರ್ಧ ತೋಳು) ಈ ಕೆಳಕಂಡಂತೆ ದರಗಳನ್ನು ನಮೂದಿಸಿದ್ದು, ಸದರಿ ದರಗಳನ್ನು ಒಪ್ಪಿ, ಸದರಿ ಸಂಸ್ಥೆಯವರಿಗೆ ದಿನಾಂಕ: 18-01-2021 ಮತ್ತು 06-03-2021 ಗಳಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಕ್ರ ಸಂ	ತರಗತಿಗಳ ವಿವರ	ದರ (ರೂ.ಗಳಲ್ಲಿ)	ಜಿ.ಎಸ್.ಟಿ.ದರ (5%)(ರೂ.ಗಳಲ್ಲಿ)	ಒಟ್ಟು ದರ (ರೂ.ಗಳಲ್ಲಿ)
1	1 ರಿಂದ 4ನೇ ತರಗತಿ	1038.09	51.90	1090.00
2	5 ರಿಂದ 7ನೇ ತರಗತಿ	1057.14	52.86	1110.00
3	8 ರಿಂದ 10ನೇ ತರಗತಿ	11142.85	57.15	1200.00
4	11 ರಿಂದ 12ನೇ ತರಗತಿ (ಪಿ.ಯು.ಸಿ)	1219.04	61.00	1280.00
5	ಪದವಿ ಕಾಲೇಜು	1219.04	61.00	1280.00

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದವರಿಗೆ ಒಟ್ಟು 14,146 ಸಂಖ್ಯೆಯಷ್ಟು ಸ್ವೆಟರ್‌ಗಳನ್ನು ಸರಬರಾಜು ಮಾಡಲು ಆದೇಶ ನೀಡಲಾಗಿದ್ದು, ಸದರಿ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಒಟ್ಟು 14,433 ಸಂಖ್ಯೆಯಷ್ಟು ಸ್ವೆಟರ್‌ಗಳನ್ನು ಸರಬರಾಜು ಮಾಡಿರುತ್ತಾರೆ.

ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಜನವರಿ-2021 ರಿಂದ ಏಪ್ರಿಲ್-2021ರವರೆಗೆ ಇಸ್ಕಾನ್ ವತಿಯಿಂದ ಆಹಾರ ಸಾಮಗ್ರಿಗಳ ವಿತರಣೆ ಸಂದರ್ಭದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಸರ್ಕಾರದ ನಿಯಾಮನುಸಾರ ಪದವಿ ಪೂರ್ವ ಮತ್ತು ಪದವಿ ಕಾಲೇಜು ಚಾಲ್ತಿಯಲ್ಲಿರುವ ದಿನಗಳಂದು ವಿದ್ಯಾರ್ಥಿಗಳಿಗೆ ಒಟ್ಟು 13,988 ಸಂಖ್ಯೆಯಷ್ಟು ಸ್ವೆಟರ್‌ಗಳನ್ನು ವಿತರಣೆ ಮಾಡಲಾಗಿರುತ್ತದೆ. ಗೈರುಹಾಜರಾದ ವಿದ್ಯಾರ್ಥಿಗಳಿಗೆ ವಿತರಣೆ ಮಾಡದೆ ಇರುವ ಉಳಿಕೆ 445 ಸಂಖ್ಯೆಯಷ್ಟು ಸ್ವೆಟರ್‌ಗಳನ್ನು ದಾಸ್ತಾನು ಲೆಕ್ಕದಲ್ಲಿ ಶೇಖರಣೆ ಮಾಡಲಾಗಿದ್ದು, ಹಾಜರಾತಿಗೆ ಅನುಗುಣವಾಗಿ ವಿತರಣೆ ಮಾಡಲಾಗುವುದು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರಸಂ	ಶಾಲೆಗಳ ವಿವರ	ಬೇಡಿಕೆ	ಸ್ವೀಕೃತಿ	ವಿತರಣೆ	ಉಳಿಕೆ
1	ಪ್ರಾಥಮಿಕ ಶಾಲೆ	2633	2633	2434	199
2	ಪ್ರೌಢಶಾಲೆ	5852	5852	5704	148
3	ಪದವಿಪೂರ್ವ ಕಾಲೇಜು	4716	4716	4644	72
4	ಪದವಿ ಕಾಲೇಜು	1232	1232	1206	26
ಒಟ್ಟು		14433	14433	13988	445

		ಪಾಲಿಕೆಯ ವತಿಯಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆರವರಿಗೆ 14,150 ಸಂಖ್ಯೆಯಷ್ಟು ಸ್ವೆಟರ್‌ಗಳನ್ನು ಸರಬರಾಜು ಮಾಡಿರುವುದಕ್ಕೆ ಬಾಬ್ತು ರೂ. 1,72,11,648/-ಗಳಲ್ಲಿ ಟಿ.ಡಿ.ಎಸ್. ಮೊತ್ತ ರೂ. 3,44,219/-ಗಳನ್ನು ಕಟಾವು ಮಾಡಿ, ರೂ. 1,68,66,741/-ಗಳನ್ನು ಪಾವತಿ ಮಾಡಲಾಗಿದೆ. ಉಳಿದಂತೆ, ಯಾವುದೇ ರೀತಿಯ ಹೆಚ್ಚುವರಿ ಮೊತ್ತವನ್ನು ಬಿಬಿಎಂಪಿ ವತಿಯಿಂದ ಪಾವತಿ ಮಾಡಿರುವುದಿಲ್ಲ.

ನಅಇ 185 ಎಂಎನ್‌ಜಿ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ